ಪ್ರಾರಂಭದಲ್ಲಿ ಮಹಾಕಾವ್ಯ ನಾಯಕರ ಲಕ್ಷಣ, ಕಾವ್ಯಗಳು ಒಳಗೊಳ್ಳುವ ದೇವ–ಮಾನವ–ರಾಕ್ಷಸ ಪಾತ್ರಗಳು, ಮಾನವಾತೀತ ಶಕ್ತಿಯ ಅಸ್ತಿತ್ವದ ಸ್ವೀಕಾರ, ಮಹಾಕಾವ್ಯಗಳಲ್ಲಿ ಶತೃವಿಗೂ ದೊರಕುವ ಗೌರವ, ಇತ್ಯಾದಿ ಸಾಮ್ಯಗಳನ್ನು ಬಹು ಸಂಕ್ಷಿಪ್ತವಾಗಿ ಗುರುತಿಸಿ ಅನಂತರ ಎಲ್.ಎಸ್.ಎಸ್. ಅವುಗಳ ನಡುವೆ ಇರಬಹುದಾದ ಭಿನ್ನತೆಗಳನ್ನು ಮತ್ತು ಆ ಭಿನ್ನತೆಗಳಿಗೆ ಕಾರಣವಾಗಿರಬಹುದಾದ ಸಾಂಸ್ಕೃತಿಕ–ಸಾಮಾಜಿಕ ಸಂಹಿತೆಗಳನ್ನು ದೀರ್ಘವಾಗಿ ಚರ್ಚೆಗೆ ಎತ್ತಿಕೊಳ್ಳುತ್ತಾರೆ. ಅವುಗಳಲ್ಲಿ ಮುಖ್ಯವಾದ ಕೆಲವು ಅಂಶಗಳು ಹೀಗಿವೆ:

(1) ಸಂವಿಧಾನದ ನೆಲೆಯಲ್ಲಿ ಎದ್ದು ಕಾಣುವ ಒಂದು ಮುಖ್ಯ ಭಿನ್ನತೆಯೆಂದರೆ, ಪಾಶ್ಚಿಮಾತ್ಯ ಮಹಾಕಾವ್ಯಗಳು ಕಥೆಯ ಮಧ್ಯದಲ್ಲಿ ('in medias res' ಲ್ಯಾಟಿನ್), ಉತ್ಕಟ ಸನ್ನಿವೇಶವೊಂದರಿಂದ ಪ್ರಾರಂಭವಾದರೆ ಭಾರತೀಯ ಮಹಾಕಾವ್ಯಗಳೆಲ್ಲವೂ ಕಥೆಯ ನಾಯಕನ ಜನ್ಮದಿಂದ ಅಥವಾ ಅವನ ಪೂರ್ವಜರ ವೃತ್ತಾಂತದಿಂದ ಪ್ರಾರಂಭವಾಗಿ, ಕಾಲಾನುಕ್ರಮವಾಗಿ ಮುಂದುವರೆದು ನಾಯಕನ ವಿಜಯದಿಂದ ಅಥವಾ ಸಾವಿನಿಂದ ಮುಕ್ತಾಯವಾಗುತ್ತವೆ. ಈ ಕಾರಣದಿಂದ, ಪಾಶ್ಚಾತ್ಯ ಮಹಾಕಾವ್ಯಗಳ ಸಂವಿಧಾನಗಳಲ್ಲಿ ಕಂಡುಬರುವ ನಾಟಕೀಯತೆ ಭಾರತೀಯ ಮಹಾಕಾವ್ಯಗಳಲ್ಲಿ ಕಂಡುಬರುವುದಿಲ್ಲ. ಈ ಬಗೆಯ ಸಂವಿಧಾನಗಳು ಧ್ವನಿಸುವ ವಿಶ್ವದೃಷ್ಟಿಗಳ ಭಿನ್ನತೆಯನ್ನು ಎಲ್.ಎಸ್.ಎಸ್ ಹೀಗೆ ಗುರುತಿಸುತ್ತಾರೆ: ''...ಪಾಶ್ಚಾತ್ಯ ಕಾವ್ಯದಲ್ಲಿ ವ್ಯಕ್ತಿಯ ಭಾವಗಳ ತೀವ್ರತೆ ಸಂವಹನವಾಗುತ್ತದೆ. ವ್ಯಕ್ತಿಯು ಬದುಕಿನ ಸವಾಲುಗಳಿಗೆ ಮುಖಾಮುಖಿಯಾಗಿರುವುದನ್ನು ಕಾಣುತ್ತೇವೆ... ಭಾರತೀಯ ಮಹಾಕಾವ್ಯ ಬದುಕಿನ ಸಮಗ್ರತೆಯನ್ನು ಪುನಃಸೃಷ್ಟಿ ಮಾಡುತ್ತದೆ'' (ಪು. 8).

(2) "...ಅಸಾಧಾರಣ ವ್ಯಕ್ತಿಗಳ ಬದುಕಿನ ಹೆಚ್ಚು ಭಾಗವನ್ನು ಭಾರತೀಯ ಮಹಾಕಾವ್ಯವು ತನ್ನ ತೆಕ್ಕೆಯಲ್ಲಿ ತೆಗೆದುಕೊಂಡರೆ, ಸಾಮಾನ್ಯ ಬದುಕಿನ ಹೆಚ್ಚು ಭಾಗವನ್ನು ಪಾಶ್ಚಾತ್ಯ ಮಹಾಕಾವ್ಯವು ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುತ್ತದೆ. ಸಾಮಾನ್ಯ ಜೀವನದಲ್ಲಿ ಪಾಶ್ಚಾತ್ಯ ಮಹಾಕಾವ್ಯವು ತೋರುವ ಆಸಕ್ತಿ ಭಾರತೀಯ ಮಹಾಕಾವ್ಯದಲ್ಲಿ ಕಾಣುವುದಿಲ್ಲ'' (ಪು.11).

(3) ಕೊನೆಯದಾಗಿ, ಎಲ್.ಎಸ್.ಎಸ್. ಇನ್ನೂ ಮಹತ್ವದ ಒಂದು ಪ್ರಶ್ನೆಯನ್ನೆತ್ತುತ್ತಾರೆ: ಮನುಷ್ಯನ ಅತ್ಯಂತ ಅಸಹಾಯ ಸ್ಥಿತಿಯಲ್ಲಿ (ಈ ಪಠ್ಯಗಳು ದರ್ಶಿಸುವಂತೆ) ಅವನನ್ನು ಪೊರೆಯುವ ಶಕ್ತಿ ಯಾವುದು? ಪಠ್ಯಗಳಲ್ಲಿನ ಅನೇಕ ಘಟನೆಗಳನ್ನು ಪರಿಶೀಲಿಸಿದನಂತರ ಅವರು ಈ ತೀರ್ಮಾನಕ್ಕೆ ಬರುತ್ತಾರೆ: "ಪಾಶ್ಚಾತ್ಯ ಮಹಾಕಾವ್ಯ ಪರಂಪರೆಯಲ್ಲಿ ವ್ಯಕ್ತಿಯ ಅಗ್ನಿಪರೀಕ್ಷೆಯ ಸಂದರ್ಭದಲ್ಲಿ ಕಾಪಾಡುವುದು ಜಗತ್ತಿನ ಪ್ರೇಮ–ಕರುಣೆಗಳು – ತಾಯಿಯ ರೂಪದಲ್ಲಿ... (ಅಥವಾ) ಹೃದಯೇಶ್ವರಿಯಾಗಿ. ಭಾರತೀಯ ಮಹಾಕಾವ್ಯದಲ್ಲಿ ಅಗ್ನಿಪರೀಕ್ಷೆಯ ಗಳಿಗೆಯಲ್ಲಿ ಕಾಪಾಡುವುದು ಮನುಷ್ಯನ ಒಳಗಿನ ಸತ್ವ, ಅವನು ಪಾಲಿಸಿದ ಧರ್ಮ, ತೋರಿಸಿದ ಕರುಣೆ'' (ಪು.42).

2) ನಾಟಕ ರತ್ನಗಳು (2017): ಈ ಕೃತಿಯಲ್ಲಿ 'ವಿಶ್ವದ ಅತಿ ಶ್ರೇಷ್ಠ ನಾಟಕಗಳು' ಎಂದು ಎಲ್.ಎಸ್.ಎಸ್. ಪರಿಗಣಿಸುವ 19 ನಾಟಕಗಳ ವಿಮರ್ಶಾತ್ಮಕ ಪರಿಚಯವಿದೆ. 'ವಿಶ್ವ'ದ ಎಂದರೂ ಸಹಜವಾಗಿಯೇ ಪಾಶ್ಚಿಮಾತ್ಯ ನಾಟಕಗಳಿಗೇ ಒತ್ತು ಬಿದ್ದಿದೆ; ಅರಬ್ ರಾಷ್ಟ್ರಗಳ, ಆಫ್ರಿಕಾ ರಾಷ್ಟ್ರಗಳ, ಹಾಗೂ ಚೀನಾ–ಜಪಾನ್ ಇತ್ಯಾದಿ ಏಷ್ಯನ್ ರಾಷ್ಟ್ರಗಳ ನಾಟಕಗಳ ಪರಿಚಯ ಈ ಕೃತಿಯಲ್ಲಿಲ್ಲ. ಆದರೆ, ಇಲ್ಲಿ ಎಲ್.ಎಸ್.ಎಸ್. ವ್ಯಾಖ್ಯಾನಿಸುವ ನಾಟಕಗಳೆಲ್ಲವೂ ಖ್ಯಾತ ನಾಟಕಗಳೇ: 'ಅಗಮೆಮ್‌ನಾನ್,' 'ಈಡಿಪಸ್ ರೆಕ್ಸ್,' 'ಡಾಕ್ಟರ್ ಫಾಸ್ಟಸ್,' 'ಹ್ಯಾಮ್ಲೆಟ್,' 'ಫೀಡ್ರಾ,' ಇತ್ಯಾದಿ. ಎರಡು ಭಾರತೀಯ ನಾಟಕಗಳ ವ್ಯಾಖ್ಯಾನವಿದೆ: 'ಅಭಿಜ್ಞಾನ ಶಾಕುಂತಲಾ' ಮತ್ತು 'ಬೆರಳ್ಗೆ ಕೊರಳ್.'